## ನಿಮ್ಮೊಡನೆ

# ದೃಢ ನಿಲುವಿಗೆ ಸಕಾಲ

ಸರೋಜಿನಿ ಮಹಿಷಿ ವರದಿ ಅನ್ವಯ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ಕಲ್ಪಿಸುವ ರಾಜ್ಯ ಸರ್ಕಾರದ ಪ್ರಯತ್ನಕ್ಕೆ ಮತ್ತೆ ಚಾಲನೆ ದೊರೆತಿದೆ. ಖಾಸಗಿ ಕೈಗಾರಿಕೆಗಳು ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ದೊರೆತಿರುವ ಉದ್ಯೋಗಾವಕಾಶಗಳ ಬಗ್ಗೆ ಕಾರ್ಮಿಕ ಇಲಾಖೆ ಮಾಹಿತಿ ಸಂಗ್ರಹಿಸುತ್ತಿದೆ. ಸದ್ಯದಲ್ಲೇ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು, ಮಾಹಿತಿ ಸಂಗ್ರಹದ ವರದಿ ಸಚಿವ ಸಂಪುಟದ ಎದುರು ಬರಲಿದೆ. ಇದಾದ ನಂತರ, ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ನಿರ್ದಿಷ್ಟ ಪ್ರಮಾಣದ ಹುದ್ದೆಗಳನ್ನು ಮೀಸಲಿಡುವ ಕುರಿತಂತೆ ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳುವ ನಿರೀಕ್ಷೆಯಿದೆ.

‘ಕನ್ನಡಿಗರಿಗೆ ಕಡ್ಡಾಯವಾಗಿ ಉದ್ಯೋಗ ನೀಡಬೇಕು’ ಎಂದು ಸರ್ಕಾರ ಆಗಾಗ್ಗೆ ಒತ್ತಾಯಿಸುವುದು ಹಾಗೂ ಖಾಸಗಿ ಸಂಸ್ಥೆಗಳು ಜಾಣಕಿವುಡು ಪ್ರದರ್ಶಿಸುವ ಪ್ರಹಸನಗಳು ಈಗಾಗಲೇ ಸಾಕಷ್ಟು ನಡೆದಿವೆ. ಆದರೆ, ‘ಖಾಸಗಿ ರಂಗದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಲಭಿಸುತ್ತಿಲ್ಲ. ಐಟಿ–ಬಿಟಿ ಕ್ಷೇತ್ರದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ಕಡಿಮೆಯಾಗುತ್ತಿರುವುದು ಗಂಭೀರ ವಿಚಾರ’ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆತಂಕ ವ್ಯಕ್ತಪಡಿಸಿರುವುದರಿಂದ ಈ ಬಾರಿ ಸರ್ಕಾರದ ನಡೆಯ ಬಗ್ಗೆ ಕೊಂಚ ಆಶಾಭಾವ ಇರಿಸಿಕೊಳ್ಳಬಹುದು. ಹಾಗೆ ನೋಡಿದರೆ, ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರ ಕುರಿತ ಮಾಹಿತಿ ಸಂಗ್ರಹ ಸರ್ಕಾರಕ್ಕೆ ಒಂದು ಕಸರತ್ತಾಗಿ ಪರಿಣಮಿಸಬಾರದು. ಜಿಲ್ಲಾಮಟ್ಟದಲ್ಲಂತೂ 3ರಿಂದ 15 ಕೋಟಿ ರೂಪಾಯಿ ಬಂಡವಾಳ ಹೂಡಿಕೆಯ ಉದ್ದಿಮೆಗಳಿಗೆ ‘ಏಕ ಗವಾಕ್ಷಿ’ ಯೋಜನೆಯ ಅನ್ವಯ ಜಿಲ್ಲಾಧಿಕಾರಿಗಳೇ ಪರವಾನಗಿ ನೀಡುವುದರಿಂದ, ದತ್ತಾಂಶ ಸಂಗ್ರಹ ಸುಲಭವಾಗಿದೆ. ಈಗ ನಡೆಯಬೇಕಿರುವುದು ಈ ಮಾಹಿತಿಯ ಪರಿಶೀಲನೆ ಹಾಗೂ ಸಂಸ್ಕರಣೆ. ಏಕೆಂದರೆ, ಕಾರ್ಮಿಕ ಇಲಾಖೆಯ ಪ್ರಕಾರ ಈಗಾಗಲೇ ಕೈಗಾರಿಕೆಗಳಲ್ಲಿ ನೂರಕ್ಕೆ ಐವತ್ತಕ್ಕೂ ಹೆಚ್ಚು ನೌಕರಿಗಳು ಕನ್ನಡಿಗರಿಗೆ ದೊರೆತಿವೆ! ಈ ಅಂಕಿ ಅಂಶಗಳನ್ನು ನೋಡಿದರೆ ಖಾಸಗಿ ಸಂಸ್ಥೆಗಳು ಉದಾರಿಯಾಗಿವೆ ಹಾಗೂ ಕನ್ನಡಸ್ನೇಹಿಯಾಗಿವೆ. ಆದರೆ, ಪರಿಸ್ಥಿತಿ ಹಾಗಿಲ್ಲ. ಎಲ್ಲ ಸರ್ಕಾರಿ ಅಂಕಿ ಅಂಶಗಳಂತೆ, ಪ್ರಸಕ್ತ ಮಾಹಿತಿಯ ಸಾಚಾತನ ಕೂಡ ಅನುಮಾನ ಹುಟ್ಟಿಸುವಂತಿದೆ. ‘ಪ್ರಾಥಮಿಕ ಹಂತದಿಂದ ಇಲ್ಲಿಯೇ ವ್ಯಾಸಂಗ ಮಾಡಿದ್ದು, ಕನ್ನಡ ಓದಲು, ಬರೆಯಲು ಬರುವ, ಹದಿನೈದು ವರ್ಷ ಕರ್ನಾಟಕದಲ್ಲಿ ವಾಸವಾಗಿರುವವರು ಮಾತ್ರ ಕನ್ನಡಿಗರು’ ಎಂದು ಸರೋಜಿನಿ ಮಹಿಷಿ ವರದಿ ಹೇಳುತ್ತದೆ. ಅಂದರೆ, ಉನ್ನತ ವ್ಯಾಸಂಗವನ್ನು ಕರ್ನಾಟಕದಲ್ಲಿ ಪೂರೈಸಿದವರು ಅಥವಾ ಕರ್ನಾಟಕದ ವಿಳಾಸವನ್ನು ನೀಡಿರುವವರು ಕನ್ನಡಿಗರಾಗುವುದಿಲ್ಲ. ಖಾಸಗಿ ಸಂಸ್ಥೆಗಳು ನೀಡುವ ಅಂಕಿ ಅಂಶಗಳಲ್ಲಿ ‘ಕೇರಾಫ್ ಕನ್ನಡಿಗರು’ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಕನ್ನಡಪರ ಸಂಘಟನೆಗಳು ಅನೇಕ ಸಲ ಎತ್ತಿತೋರಿಸಿವೆ. ಈ ಹಿನ್ನೆಲೆಯಲ್ಲಿ ‘ತಂತ್ರಜ್ಞಾನ ಸಂಸ್ಥೆಗಳು ನೀಡುವ ಮಾಹಿತಿಯನ್ನು ಕರ್ನಾಟಕ ಸರ್ಕಾರವೇ ಅಸ್ತಿತ್ವಕ್ಕೆ ತಂದಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿ, ಮಾಹಿತಿಯ ನೈಜತೆಯನ್ನು ಸ್ಪಷ್ಟಪಡಿಸಿಕೊಳ್ಳಬೇಕು’ ಎನ್ನುವ ವಾದವನ್ನು ಗಮನಿಸಬೇಕಿದೆ.

> ಬೆಂಗಳೂರಿನಲ್ಲಿನ ಐಟಿ–ಬಿಟಿ ಸಂಸ್ಥೆಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿರುವುದನ್ನು ಆ ಕ್ಷೇತ್ರದ ಪ್ರಾಥಮಿಕ ಪರಿಚಯ ಇರುವವರೆಲ್ಲ ಬಲ್ಲರು. ಎಲ್ಲ ಬಗೆಯ ಸರ್ಕಾರಿ ಸವಲತ್ತುಗಳ ಫಲಾನುಭವಿಗಳಾದ ಈ ಸಂಸ್ಥೆಗಳು, ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾತ್ರ ‘ಗುಣಮಟ್ಟ’ದ ಮಾನದಂಡ ಜಪಿಸುತ್ತವೆ.

ಬೆಂಗಳೂರಿನಲ್ಲಿನ ಐಟಿ–ಬಿಟಿ ಸಂಸ್ಥೆಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿರುವುದನ್ನು ಆ ಕ್ಷೇತ್ರದ ಪ್ರಾಥಮಿಕ ಪರಿಚಯ ಇರುವವರೆಲ್ಲ ಬಲ್ಲರು. ಎಲ್ಲ ಬಗೆಯ ಸರ್ಕಾರಿ ಸವಲತ್ತುಗಳ ಫಲಾನುಭವಿಗಳಾದ ಈ ಸಂಸ್ಥೆಗಳು, ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾತ್ರ ‘ಗುಣಮಟ್ಟ’ದ ಮಾನದಂಡ ಜಪಿಸುತ್ತವೆ. ಕೌಶಲ್ಯದ ನೆಪದಲ್ಲಿ ಕನ್ನಡಿಗರನ್ನು ನಿರಂತರವಾಗಿ ಉದ್ಯೋಗಗಳಿಂದ ವಂಚಿಸಲಾಗುತ್ತಿದೆ. ಪ್ರಸ್ತುತ ಬೆಂಗಳೂರಿನಲ್ಲಿ ಚಾಲ್ತಿಯಲ್ಲಿರುವ ಬಹುತೇಕ ಉದ್ದಿಮೆಗಳು ಹೊರಗುತ್ತಿಗೆ ಕೆಲಸಗಳನ್ನು ಅವಲಂಬಿಸಿವೆ. ಹೆಚ್ಚೇನೂ ಕೌಶಲ್ಯ ಬೇಕಾಗದ ಈ ಕೆಲಸಗಳಿಂದ ಕೂಡ ಕನ್ನಡಿಗರನ್ನು ದೂರವಿಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಗಳ ನೇಮಕಾತಿಗಳ ಬಗ್ಗೆ ಸರ್ಕಾರ ಸ್ಪಷ್ಟ ನಿಯಮಾವಳಿ ರೂಪಿಸಬೇಕಾಗಿದೆ. (ಇತ್ತೀಚೆಗಷ್ಟೇ ಸಚಿವ ಸಂಪುಟ ಹಸಿರು ನಿಶಾನೆ ತೋರಿಸಿರುವ ‘ಕೈಗಾರಿಕಾ ನೀತಿ 2014–2019’ರಲ್ಲಿ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶದ ಪ್ರಮಾಣವನ್ನು ಸ್ಪಷ್ಟಗೊಳಿಸಿಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು).

ಪ್ರಸ್ತುತ ಖಾಸಗಿ ವಲಯದಲ್ಲಿ ಕನ್ನಡಿಗರು ಹೊಂದಿರುವ ಉದ್ಯೋಗಾವಕಾಶಗಳ ಮಾಹಿತಿ ಸಂಗ್ರಹ ನಡೆಯುತ್ತಿರುವುದು ಸ್ವಾಗತಾರ್ಹ. ಆದರೆ, ಈ ಮಾಹಿತಿ ವಸ್ತುನಿಷ್ಠವಾಗಿರುವಂತೆ ಸರ್ಕಾರ ಎಚ್ಚರ ವಹಿಸಬೇಕಾಗಿದೆ. ಅಂತೆಯೇ, ಕನ್ನಡಿಗರಿಗೆ ನೀಡಬೇಕಾದ ಉದ್ಯೋಗಾವಕಾಶದ ಪ್ರಮಾಣವನ್ನು ಸ್ಪಷ್ಟಪಡಿಸಬೇಕಾಗಿದೆ. ‘ಮಕ್ಕಳ ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಆಯ್ಕೆಯನ್ನು ಪೋಷಕರಿಗೇ ಬಿಡಬೇಕು’ ಎನ್ನುವ ಸುಪ್ರೀಂಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲೂ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುವ ಚಿಂತನೆ ಮಹತ್ವದ್ದಾಗಿದೆ. ಕನ್ನಡದಲ್ಲಿ ಕಲಿತವರಿಗೆ ಉದ್ಯೋಗಾವಕಾಶದ ಸಾಧ್ಯತೆ ಹೆಚ್ಚಾದಾಗ, ಸಹಜವಾಗಿಯೇ ಮಕ್ಕಳನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಲು ಪೋಷಕರು ಮುಂದಾಗುತ್ತಾರೆ.

■ ರಘುನಾಥ ಚ.ಹ.

